ಸಿ.ಸಿಃ 611/2023
ಪಿ.ಡಬ್ಲ್ಯೂಃ 01

**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಸವನ-ಬಾಗೇವಾಡಿ**

**ಸಾಕ್ಷಿಗೆ ದಿನಾಂಕ 22.12.2023 ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ಶ್ರೀಮತಿ ಎಸ್.ಆರ್.ಜಿ ವಕೀಲರಿಂದಃ**

1. C.C No.612/2023 ರಲ್ಲಿ ದೂರುದಾರರಾದ ಉಮುಲು ಲಮಾಣಿಯವರು ನನ್ನ ಚಿಕ್ಕಪ್ಪ. ಅವರ ಮಗನ ಹೆಸರು ರಮೇಶ ಲಮಾಣಿ ಎಂದರೆ ಸರಿ. ಆರೋಪಿಯ ತಾಯಿಯ ತವರು ಮನೆ ಮಣೂರು ಎಲ್.ಟಿ. ಗ್ರಾಮ ಎಂದರೆ ಸರಿ. ನನ್ನ ಖುದ್ದು ಊರು ಕೂಡಾ ಮಣೂರು ಎಲ್.ಟಿ. ಎಂದರೆ ಸರಿ.

2. ಆರೋಪಿಯ ಸೋದರ ಮಾವಂದಿರು ಮತ್ತು ನಾವು ಸಂಬಂಧಿಕರು ಎಂದರೆ ಸರಿ. ಆದ್ದರಿಂದ ನಾವಿಬ್ಬರೂ ಒಬ್ಬರ ಮನೆಗೆ ಇನ್ನೊಬ್ಬರು ಬಂದು ಹೋಗುತ್ತಿದ್ದೆವು ಎಂದರೆ ಸರಿ. ಆರೋಪಿ ಜುಲೈ 2021 ರಲ್ಲಿ ಹೊಲ ಮತ್ತು ಹಿಟಾಚಿ ವಾಹನವನ್ನು ಖರೀದಿಸಿದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅದೇ ರೀತಿ ನನ್ನ ಬಳಿ ಜುಲೈ 2021 ರಲ್ಲಿ 9 ಲಕ್ಷ ರೂ ಹಣವನ್ನು ಹೊಂದಿದ್ದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿ.

3. ನಾನು ಕೂಲಿ ಕೆಲಸ ಮಾಡುತ್ತೇನೆ. ನಮ್ಮ ಮನೆತನಕ್ಕೆ ಮಣೂರು ಗ್ರಾಮದಲ್ಲಿ ಸ.ನಂಬರ 29/1, 10 ಎಕರೆ, 16 ಗುಂಟೆ ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ನಾವು ಒಟ್ಟು 7 ಜನ ಪಾಲುದಾರರು ಇದ್ದೇವೆ ಎಂದರೆ ಸರಿ.

4. ಸಾಕ್ಷಿಗೆ ಈ ಹಂತದಲ್ಲಿ ಸ.ನಂಬರ 29/1 ರ ಪಹಣಿ ಪತ್ರಿಕೆಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

5. ಸದರಿ ಜಮೀನು ಸಹ ದಿಃ 24.02.2021 ರಂದು ನನ್ನ ಸ್ವಾಧೀನಕ್ಕೆ ಬಂದಿದೆ ಎಂದರೆ ಸಾಕ್ಷಿಯು ನನ್ನ ತಂದೆ ತೀರಿಕೊಂಡ ನಂತರ ವಾರಸವಾಗಿದೆ ಎಂದ ನುಡಿಯುತ್ತಾರೆ. ಸದರಿ ಜಮೀನಿನ ಮೇಲೆ ಸುಮಾರು 1,50,000/- ರೂ ಸಾಲವಿದೆ ಎಂದರೆ ಸರಿ. ಸದರಿ ಸಾಲ ಮೊದಲಿನಿಂದಲೂ ಇದೆ. ಅದನ್ನು ನಾವು ತುಂಬುವುದು ಮತ್ತು ತೆಗೆದುಕೊಳ್ಳುವುದು ಮಾಡುತ್ತೇವೆ.

6. ಸದರಿ ಸಾಲವನ್ನು ನಮ್ಮ ಮನೆತನದ ಅವಶ್ಯಕತೆಗೆ ತೆಗೆದುಕೊಳ್ಳಲಾಗಿದೆ ಎಂಬ ಪ್ರಶ್ನೆಯು ಈ ಸಂದರ್ಭದಲ್ಲಿ ಅಪ್ರಸ್ತುತವಾಗಿರುವುದರಿಂದ ನಿರಾಕರಿಸಲಾಯಿತು.

7. ಆರೋಪಿಯ ತಂದೆಗೆ ಅವನೊಬ್ಬನೇ ಮಗ ಎಂದರೆ ಸರಿ. ಆರೋಪಿಗೆ ಅವರ ತಂದೆಯಿಂದ ಅಂದಾಜು 2 ಎಕರೆ ತೋಟ ವಾರಸನಾಥೆಯಿಂದ ಬಂದಿದೆ ಎಂದರೆ ನನಗೆ ಗೊತ್ತಿಲ್ಲ.ಅಷ್ಟೇ ಅಲ್ಲದೇ ಆರೋಪಿ ದಿಃ 25.07.2022 ರಂದು 3 ಎಕರೆ 6 ಗುಂಟೆ ಜಮೀನನ್ನು ಮಣೂರು ಗ್ರಾಮದ ಸ.ನಂಬರ 249/8 ರಲ್ಲಿ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಆರೋಪಿ ದ್ರಾಕ್ಷಿ ಬೆಳೆಯನ್ನು ಬೆಳೆದಿದ್ದಾನೆ ಎಂದರೆ ಸರಿ.

8. ಸನ್ 2021 ರ ಜುಲೈ ನಲ್ಲಿ ಆರೋಪಿಯು ಯಾವುದೇ ಹೊಲ ಮತ್ತು ಹಿಟಾಚಿ ವಾಹನವನ್ನು ಖರೀದಿಸಿಲ್ಲ, ಆದ್ದರಿಂದ ಅವರಿಗೆ ಆಗ ಯಾವುದೇ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ಅವನು ಖರೀದಿಸಿದ್ದಾನೋ ಇಲ್ಲವೋ ಗೊತ್ತಿಲ್ಲ, ಆದರೆ, ನಾನು ಅವನಿಗೆ ಹಣ ನೀಡಿದ್ದೇನೆ ಎಂದು ನುಡಿಯುತ್ತಾರೆ.

9. ನಾನು ಆರೋಪಿಗೆ ನೀಡಲು 9 ಲಕ್ಷ ರೂ ಹಣವನ್ನು ನಾವು ಹೊಲವನ್ನು ಮಾಡಿ ಪಡೆದ ಹಣದಿಂದ ನೀಡಿರುತ್ತೇನೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಯಾವ ದಿನಾಂಕದಂದು ಹಣ ನೀಡಿದ್ದೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಅನಕ್ಷರಸ್ಥ. ಸುಮಾರು 2 ವರ್ಷಗಳ ಹಿಂದೆ ಹಣ ನೀಡಿದ್ದೇನೆ ಎಂದು ಸಾಕ್ಷಿ

ನುಡಿಯುತ್ತಾರೆ. ನಾನು ಆರೋಪಿಗೆ ಬ.ಬಾಗೇವಾಡಿಯ IDFC ಬ್ಯಾಂಕಿನ ಹೊರಗೆ ಹಣ ನೀಡಿದ್ದೇನೆ.

10. ಆ ದಿನ ನಾನು IDFC ಬ್ಯಾಂಕ್ ನಲ್ಲಿ ನಾನು ಹೊಂದಿರುವ ಖಾತೆಯಿಂದ ಹಣವನ್ನು ತಗೆದು ಆರೋಪಿಗೆ ನೀಡಿರುತ್ತೇನೆ. ನಾನು ಆರೋಪಿಗೆ ಆದಿನ ಹಣವನ್ನು ನಗದು ರೂಪದಲ್ಲಿಯೇ ನೀಡಿದ್ದೇನೆ. ನೀವು ಹಣವನ್ನು ಖಾತೆಯಿಂದ ಖಾತೆಗೆ ಅಥವಾ ಚೆಕ್ಕು ಮೂಲಕ ಅಥವಾ ಡಿ.ಡಿ ಮೂಲಕ ಆರೋಪಿಗೆ ನೀಡಬಹುದಾಗಿತ್ತು, ಆದರೆ ಯಾವ ಕಾರಣದಿಂದ ನಗದು ರೂಪದಲ್ಲಿ ನೀಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಹತ್ತಿರ ಚೆಕ್ಕು ಇರಲಿಲ್ಲ, ನಾವು ನಾಲ್ಕು ಜನ ಸೇರಿ ನಮ್ಮವರಾದ ಕಾರಣ ನಗದು ರೂಪದಲ್ಲಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ಅದೇ ದಿನ ಅದೇ ಸಮಯದಲ್ಲಿ ನನ್ನ ಚಿಕ್ಕಪ್ಪ ಉಮಲು ಕೂಡಾ ಆರೋಪಿಗೆ ಹಣವನ್ನು ನೀಡಿರುತ್ತಾರೆ.

11. ಅಜಿತ್ ವಾಲು ಲಮಾಣಿ ನನ್ನ ಅಕ್ಕನ ಮಗ. ದಿಃ 27.07.2021 ರಂದು ಬ.ಬಾಗೇವಾಡಿಯಲ್ಲಿ ನಾನು ಆರೋಪಿಗೆ 9 ಲಕ್ಷ ರೂ ನೀಡಿದ್ದೇನೆ ಎಂದು ಸುಳ್ಳು ದೂರಿನಲ್ಲಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಅಜಿತ್ ವಾಲು ಲಮಾಣಿ ಮತ್ತು ರಮೇಶ ಲಮಾಣಿ ನನ್ನ ಸಂಬಂಧಿಕರಾದ ಕಾರಣ ಅವರನ್ನು ಸಾಕ್ಷಿದಾರರು ಎಂದು ದೂರಿನಲ್ಲಿ ಬರೆಸಿದ್ದೇನೆ ಎಂದರೆ ಸಾಕ್ಷಿಯು ನಾವೆಲ್ಲರೂ ಸೇರಿ ಹಣ ನೀಡಿದ್ದರಿಂದ ಬರೆಸಿದ್ದೇನೆ ಎಂದು ನುಡಿಯುತ್ತಾರೆ.

12. ಹಣ ನೀಡಿದ ಬಗ್ಗೆ ಆರೋಪಿಯಿಂದ ನಾವು ಯಾವುದೇ ದಾಖಲೆಗಳನ್ನು ಪಡೆದಿಲ್ಲ. ದಾಖಲೆಗಳನ್ನು ಪಡೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಈ ಪ್ರಕರಣದ ಚೆಕ್ಕಿಗೂ ಮುನ್ನ ಆರೋಪಿಗೆ ಸಂಬಂಧಿಸಿದ ಬೇರೆ ಯಾವುದಾದರೂ ಚೆಕ್ಕನ್ನು ನನ್ನ ಖಾತೆಗೆ ಹಾಕಿದ್ದೇನೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಹಾಕಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಚೆಕ್ಕು 5 ಲಕ್ಷ ರೂಗಳಿಗೆ ಇರುತ್ತದೆ, ಆದರೆ ಅದರ ಚೆಕ್ಕು ನಂಬರ ಗೊತ್ತಿಲ್ಲ. ಸದರಿ ಚೆಕ್ಕನ್ನು ಸಹ ಪ್ರಸ್ತುತ ಪ್ರಕರಣದ ವ್ಯವಹಾರಕ್ಕೆ ಸಂಬಂಧಿಸಿದಂತೆಯೇ ಆರೋಪಿ ನನಗೆ ನೀಡಿದ್ದನು.

13. ದಿಃ 23.01.2023 ರಂದು ಆರೋಪಿ ನನಗೆ ಒಂದು ನೋಟಿಸು ನೀಡಿದ್ದ ಎಂದರೆ ಸರಿ. ಸದರಿ ನೋಟಿಸಿಗೆ ಮಾರ್ಚ್ 2023 ರವರೆಗೆ ಮರುತ್ತರ ನೀಡಿರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಾಗಿರಲಿಲ್ಲ, ಆದ್ದರಿಂದ ನಾನು ಮಾರ್ಚ್ ನಲ್ಲಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ನೋಟಿಸಿನಲ್ಲಿ ಆರೋಪಿಯು ಪ್ರಸ್ತುತ ಪ್ರಕರಣದ ಚೆಕ್ಕು ನಂಬರ 571807, ಮತ್ತು ಇನ್ನು ಎರಡು ಚೆಕ್ಕುಗಳು ಅಂದರೆ 571805, ಮತ್ತು 571806 ಗಳು ಜುಲೈ 2022 ರಲ್ಲಿ ಕಳೆದು ಹೋಗಿವೆ, ಅವುಗಳು ನಿಮ್ಮ ತಾಬಾದಲ್ಲಿವೆ ಎಂದು ಗೊತ್ತಿದ್ದು, ಅವುಗಳನ್ನು ದುರುಪಯೋಗಪಡಿಸಿಕೊಳ್ಳದೇ ಮರಳಿ ನೀಡಿ ಎಂದು ನೋಟಿಸು ನೀಡಿದ್ದರು ಎಂದರೆ ಸರಿ.

14. ಸದರಿ ನೋಟಿಸಿಗೆ ನಾನು ಮರುತ್ತರ ನೀಡದೇ ದಿಃ 04.03.2023 ರಂದು ಅವುಗಳಲ್ಲಿ ಒಂದಾದ ಚೆಕ್ಕನ್ನು ಬ್ಯಾಂಕಿಗೆ ನಗದೀಕರಣಕ್ಕೆ ಪ್ರಸ್ತುತ ಪಡಿಸಿದೆನು ಎಂದರೆ ಸರಿ. ಆರೋಪಿ ನಮಗೆ ಸದರಿ ಚೆಕ್ಕನ್ನು ದುರುಪಯೋಗ ಮಾಡಬೇಡಿರಿ ಎಂಬ ನೋಟಿಸು ಕೊಟ್ಟಿದ್ದರೂ ಸಹ ಪ್ರಸ್ತುತ ಪ್ರಕರಣದ ಚೆಕ್ಕನ್ನು ಬ್ಯಾಂಕಿಗೆ ನಗದೀಕರಣಕ್ಕೆ ಅವನಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದಲೇ ಸಲ್ಲಿಸಿದ್ದೇವೆ ಎಂದರೆ ಸಾಕ್ಷಿಯು ಅವನು ಹಣವನ್ನು ಮರುಪಾವತಿ ಮಾಡದೇ 1 ವರ್ಷ ಸಮಯ ಆಗಿತ್ತು, ನಾವು ಸಾಕಷ್ಟು ಸಲ ಹಣ ಮರುಪಾವತಿಗೆ ಕೇಳಿದ್ದರೂ ಸಹ ಅವನು ಹಣ ಮರುಪಾವತಿ ಮಾಡಿರಲಿಲ್ಲ, ನೋಟಿಸು ಬಂದಾಗ ಅವನನ್ನು ಹೋಗಿ ಭೇಟಿ ಮಾಡಿ ಕೇಳಿದಾಗ ಅವನು ನಮಗೆ ಹೊಸ ಬೇರೆ ಚೆಕ್ಕು ನೀಡುವುದಾಗಿ ಹೇಳಿದ್ದ, ಆದರೆ, ನೀಡದೇ ಇದ್ದ ಕಾರಣ ನಾನು ಪ್ರಸ್ತುತ ಪ್ರಕರಣದ ಚೆಕ್ಕನ್ನು ನಗದೀಕರಣಕ್ಕೆ ಬ್ಯಾಂಕಿಗೆ ಹಾಕಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ಪ್ರಸ್ತುತ ಪ್ರಕರಣದಲ್ಲಿನ ಚೆಕ್ಕನ್ನು ಆರೋಪಿ ನನಗೆ ಯಾವ ದಿನಾಂಕದಂದು ನೀಡಿದ್ದಾನೆ ಎಂದು ನಿಗದಿತವಾಗಿ ಹೇಳಲು ಬರುವುದಿಲ್ಲ, ಆದರೆ, ಆರೋಪಿ ನನಗೆ ಸದರಿ ಚೆಕ್ಕನ್ನು ನೀಡಿ 1 ವರ್ಷ ಸಂಧಿವೆ. ನನಗೆ ಆರೋಪಿ ಮೊದಲು ಒಂದು ಚೆಕ್ಕು, ಇನ್ನೊಮ್ಮೆ ಇನ್ನೊಂದು ಚೆಕ್ಕನ್ನು ನೀಡಿದ್ದಾನೆ.

ಆರೋಪಿ ನನಗೆ 9 ಲಕ್ಷ ರೂ ನ ಚೆಕ್ಕನ್ನು ನೀಡಿದ 1-2 ತಿಂಗಳ ನಂತರ ನಾನು ನಗದೀಕರಣಕ್ಕೆ ಬ್ಯಾಂಕಿಗೆ ಹಾಕಿರುತ್ತೇನೆ.

16. ನಿಪಿ-1 ರಲ್ಲಿ ಸಹಿಯನ್ನು ಹೊರತುಪಡಿಸಿ, ಉಳಿದ ಎಲ್ಲಾ ಹಸ್ತಾಕ್ಷರ ಅಥವಾ ಬರವಣಿಗೆ ಆರೋಪಿಯದ್ದಲ್ಲ ಅದನ್ನು ನಾನೇ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯು ಹೇಳಿದಂತೆ ನಾನೇ 9 ಲಕ್ಷ ರೂ ಹಣವನ್ನು ಬರೆದುಕೊಂಡು ಬ್ಯಾಂಕಿಗೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ನನ್ನ ಹೆಸರು ಮತ್ತು ಮೊತ್ತವನ್ನು ಸಹ ನಾನೇ ಬೇರೆಯವರಿಂದ ಬರೆಯಿಸಿ ಹಾಕಿದ್ದೇನೆ.

**ಮುಂದುವರೆದ ಪಾಟೀಸವಾಲಿಗೆ ಆರೋಪಿಪರ ವಕೀಲರ ಕೋರಿಕೆಯಂತೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಬಸವನ-ಬಾಗೇವಾಡಿ.**